ಈ ಪ್ರಶ್ನೆಪುಸ್ತಿಕೆಯನ್ನು ತೆರೆಯುವಂತೆ ನಿಮಗೆ ತಿಳಿಸುವವರೆಗೂ ಇದನ್ನು ತೆರೆಯಕೂಡದು.

ವರ್ಷನ್ ಕೋಡ್

**A**

**ವಿಷಯ ಸಂಕೇತ : 34**

ಕ್ರಮ ಸಂಖ್ಯೆ :

# ಪ್ರಶ್ನೆಪುಸ್ತಿಕೆ
# ನಿರ್ದಿಷ್ಟ ಪತ್ರಿಕೆ
## (ಪತ್ರಿಕೆ-II)

ಗರಿಷ್ಠ ಸಮಯ : 2 ಗಂಟೆಗಳು

ಗರಿಷ್ಠ ಅಂಕಗಳು : 200

## ಸೂಚನೆಗಳು

1. ಪರೀಕ್ಷೆ ಪ್ರಾರಂಭಗೊಂಡ ತಕ್ಷಣವೇ ಓ.ಎಂ.ಆರ್. ಉತ್ತರ ಹಾಳೆಯಲ್ಲಿ ಪ್ರಶ್ನೆ ಪತ್ರಿಕೆ ಶ್ರೇಣಿಯನ್ನು ಗುರುತು ಮಾಡುವ ಮೊದಲು, ಈ ಪ್ರಶ್ನೆ ಪುಸ್ತಿಕೆಯಲ್ಲಿ ಮುದ್ರಿತವಾಗದ ಅಥವಾ ಹರಿದಿರುವ ಅಥವಾ ಯಾವುದೇ ಪುಟ ಇಲ್ಲದಿರುವ ಅಥವಾ ಮುದ್ರಿತವಾಗದ ಪ್ರಶ್ನೆಗಳು ಇತ್ಯಾದಿ ಒಳಗೊಂಡಿಲ್ಲವೆಂಬುದನ್ನು ನೀವು ಪರೀಕ್ಷಿಸತಕ್ಕದ್ದು. ಮೇಲಿನ ಯಾವುದೇ ದೋಷ ಕಂಡುಬಂದಲ್ಲಿ ಅದನ್ನು ಹಿಂತಿರುಗಿಸಿ ಲಭ್ಯವಿರುವ ಶ್ರೇಣಿಯ ಪರಿಪೂರ್ಣವಾದ ಬೇರೆ ಪ್ರಶ್ನೆ ಪುಸ್ತಿಕೆಯನ್ನು ಪಡೆಯತಕ್ಕದ್ದು.
2. ಅಭ್ಯರ್ಥಿಯು ಪ್ರಶ್ನೆ ಪುಸ್ತಿಕೆಯ ವರ್ಷನ್ ಕೋಡ್ **A, B, C** ಅಥವಾ **D,** ಅನ್ನು ಮತ್ತು ನೋಂದಣಿ ಸಂಖ್ಯೆಯನ್ನು **OMR** ಉತ್ತರ ಪತ್ರಿಕೆಯಲ್ಲಿ ಅದಕ್ಕಾಗಿ ಒದಗಿಸಲಾಗಿರುವ ಸ್ಥಳದಲ್ಲಿ ಬರೆದು ಸಂಕೇತ (ಎನ್ ಕೋಡ್) ಗೊಳಿಸಬೇಕು. ಹಾಗೂ ನಿಗದಿತ ಸ್ಥಳದಲ್ಲಿ ತಾವು ಮತ್ತು ಸಂವೀಕ್ಷಕರು ಸಹಿ ಮಾಡಿರುವುದನ್ನು ಖಚಿತ ಪಡಿಸಿಕೊಳ್ಳಬೇಕು. ಓ.ಎಂ.ಆರ್. ಹಾಳೆಯಲ್ಲಿ ತಿಳಿಸಿರುವ ಯಾವುದೇ ಮಾಹಿತಿಯನ್ನು ಭರ್ತಿ ಮಾಡುವುದು/ಎನ್ ಕೋಡ್ ಮಾಡುವುದು ಅಭ್ಯರ್ಥಿಗಳ ಜವಾಬ್ದಾರಿಯಾಗಿರುತ್ತದೆ. ಒಂದು ವೇಳೆ ಭರ್ತಿ ಮಾಡದಿದ್ದಲ್ಲಿ/ತಪ್ಪಿದ್ದಲ್ಲಿ ಅಂತಹ ಓ.ಎಂ.ಆರ್. ಉತ್ತರ ಹಾಳೆಯನ್ನು ತಿರಸ್ಕರಿಸಲಾಗುವುದು.
3. ಪಕ್ಕದಲ್ಲಿ ಒದಗಿಸಿರುವ ಚೌಕದಲ್ಲೇ ನಿಮ್ಮ ನೋಂದಣಿ ಸಂಖ್ಯೆಯನ್ನು ನಮೂದಿಸಬೇಕು. ಪ್ರಶ್ನೆ ಪುಸ್ತಿಕೆಯಲ್ಲಿ ಬೇರೆ ಏನನ್ನೂ ಬರೆಯಬಾರದು.

| ನೊಂದಣಿ ಸಂಖ್ಯೆ |
|---|
| |

4. ಈ ಪ್ರಶ್ನೆ ಪುಸ್ತಿಕೆ **100** ಪ್ರಶ್ನೆಗಳನ್ನು ಒಳಗೊಂಡಿರುತ್ತದೆ. ಪ್ರತಿಯೊಂದು ಪ್ರಶ್ನೆಯು **4** ಉತ್ತರಗಳನ್ನು ಒಳಗೊಂಡಿರುತ್ತದೆ. ನೀವು ಉತ್ತರ ಪತ್ರಿಕೆಯಲ್ಲಿ ಗುರುತು ಮಾಡಬೇಕೆಂದಿನಿಸುವ ಉತ್ತರವನ್ನು ಆಯ್ಕೆ ಮಾಡಿಕೊಳ್ಳಿ. ಒಂದು ವೇಳೆ ಅಲ್ಲಿ ಒಂದಕ್ಕಿಂತ ಹೆಚ್ಚು ಸರಿಯಾದ ಉತ್ತರಗಳಿವೆಯೆಂದು ನೀವು ಭಾವಿಸಿದರೆ **ಅತ್ಯುತ್ತಮವೆನಿಸುವ** ಉತ್ತರಕ್ಕೆ ಗುರುತು ಮಾಡಿ. ಏನೇ ಆದರೂ ಪ್ರತಿ ಪ್ರಶ್ನೆಗೆ ನೀವು ಕೇವಲ **ಒಂದು ಉತ್ತರವನ್ನು** ಮಾತ್ರ ಆಯ್ಕೆ ಮಾಡಬೇಕು.
5. ಎಲ್ಲಾ ಉತ್ತರಗಳನ್ನು ನಿಮಗೆ ಒದಗಿಸಲಾಗಿರುವ **ಪ್ರತ್ಯೇಕ** ಉತ್ತರ ಪತ್ರಿಕೆಯಲ್ಲಿ (OMR Sheet) ಕೇವಲ **ಕಪ್ಪು ಅಥವಾ ನೀಲಿ ಶಾಯಿಯ ಬಾಲ್‌ಪಾಯಿಂಟ್** ಪೆನ್ನಿನಲ್ಲಿ **ಮಾತ್ರ** ಗುರುತು ಮಾಡಬೇಕು. ಉತ್ತರ ಪತ್ರಿಕೆ ಹಾಳೆಯಲ್ಲಿನ ಸೂಚನೆಗಳನ್ನು ಗಮನಿಸುವುದು.
6. **ಎಲ್ಲಾ ಪ್ರಶ್ನೆಗಳಿಗೆ ಸಮಾನ ಅಂಕಗಳು. ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿರಿ.**
7. ಚಿತ್ತು ಕೆಲಸಕ್ಕಾಗಿ ಹಾಳೆಗಳನ್ನು ಪ್ರಶ್ನೆ ಪುಸ್ತಿಕೆಯ ಕೊನೆಯಲ್ಲಿ ಸೇರಿಸಲಾಗಿದೆ. ಪ್ರಶ್ನೆಪುಸ್ತಿಕೆಯ ಇನ್ನುಳಿದ ಯಾವ ಭಾಗದಲ್ಲಿಯೂ ನೀವು ಯಾವ ರೀತಿಯ ಗುರುತನ್ನು ಮಾಡತಕ್ಕದ್ದಲ್ಲ.
8. ಪರೀಕ್ಷೆಯ ಮುಕ್ತಾಯವನ್ನು ಸೂಚಿಸುವ ಅಂತಿಮ ಗಂಟೆ ಬಾರಿಸಿದ ತಕ್ಷಣವೇ ಉತ್ತರ ಪತ್ರಿಕೆಯ ಹಾಳೆಯಲ್ಲಿ ಇನ್ನಾವುದೇ ಗುರುತುಮಾಡುವುದನ್ನು ನಿಲ್ಲಿಸಬೇಕು. ಸಂವೀಕ್ಷಕರು ಬಂದು ನಿಮ್ಮಲ್ಲಿರುವ ಉತ್ತರ ಪತ್ರಿಕೆಯ ಹಾಳೆಯನ್ನು ತಮ್ಮ ವಶಕ್ಕೆ ತೆಗೆದುಕೊಂಡು ಲೆಕ್ಕಕ್ಕೆ ತೆಗೆದುಕೊಳ್ಳುವವರೆಗೂ ನಿಮ್ಮ ನಿಮ್ಮ ಆಸನದಲ್ಲಿಯೇ ಕುಳಿತಿರತಕ್ಕದ್ದು.

**ಯಾವುದೇ ರೀತಿಯ ಮೊಬೈಲ್ ಫೋನ್, ಕ್ಯಾಲ್ ಕ್ಯುಲೇಟರ್ ಮತ್ತು ಇತರೆ ರೀತಿಯ ಎಲೆಕ್ಟ್ರಾನಿಕ್/ಕಮ್ಯುನಿಕೇಷನ್ ಸಾಧನಗಳು ಇತ್ಯಾದಿಗಳನ್ನು ಪರೀಕ್ಷಾ ಕೇಂದ್ರದ ಆವರಣದೊಳಗೆ ತರುವುದನ್ನು ನಿಷೇಧಿಸಿದೆ.**

1. ಕಾವ್ಯಮೀಮಾಂಸೆಯಲ್ಲಿ 'ಇತಿವೃತ್ತ' ಎಂದರೇನು ?
   (a) ವರ್ಣನಾಭಾಗ
   (b) ಕಥಾಭಾಗ
   (c) ಪ್ರವೇಶಭಾಗ
   (d) ಮುಕ್ತಾಯಭಾಗ

2. 'ಆದರ್ಶರಾಜ್ಯ' (ರಿಪಬ್ಲಿಕ್) ಯಾರ ಕೃತಿ ?
   (a) ಸಾಕ್ರೆಟಿಸ್
   (b) ಸಿಸಿರೊ
   (c) ಪ್ಲೇಟೊ
   (d) ಅರಿಸ್ಟಾಟಲ್

3. ರುದ್ರನಾಟಕ ನೋಡುತ್ತಾ ಕುಳಿತ ಸಹೃದಯರಲ್ಲಿ ಉಂಟಾಗುವುದು 'ಭಾವವಿರೇಚನ' (Catharsis) ಎಂದು ಪ್ರತಿಪಾದಿಸಿದವರು ಯಾರು ?
   (a) ಅರಿಸ್ಟಾಟಲ್
   (b) ಡಾಂಟೆ
   (c) ಬೆನ್ ಜಾನ್ಸನ್
   (d) ಕೀಟ್ಸ್

4. 'ವ್ಯಕ್ತಿತ್ವ ನಿರಸನವಾದ' ವನ್ನು ಪ್ರತಿಪಾದಿಸಿದ ಮೀಮಾಂಸಕ ಯಾರು ?
   (a) ಶೆಲ್ಲಿ
   (b) ಕುವೆಂಪು
   (c) ಟಿ.ಎಸ್. ಈಲಿಯಟ್
   (d) ಮ್ಯಾಥ್ಯೂ ಅರ್ನಾಲ್ಡ್

5. 'Imagination' (ಪ್ರತಿಭೆ) ಪರಿಕಲ್ಪನೆಯಲ್ಲಿ primary imagination, secondary imagination - ಎಂದು ಗುರುತಿಸಿದವರು ಯಾರು ?
   (a) ರಾಜಶೇಖರ
   (b) ತಿಪ್ಪೇರುದ್ರಸ್ವಾಮಿ
   (c) ಕೋಲ್‌ರಿಜ್
   (d) ಡಫಿಲಿಸ್ ಸಿಡ್ನಿ

6. 'Psychical Distance' ಎಂಬುದು ಸಂಸ್ಕೃತ ಕಾವ್ಯಮೀಮಾಂಸಕರ ಯಾವ ಪರಿಕಲ್ಪನೆಗೆ ಸಮಾನವಾಗಿದೆ ?
   (a) ವಸ್ತುಧ್ವನಿ ಪರಿಕಲ್ಪನೆ
   (b) ಸಾಧಾರಣೀಕರಣ ಪರಿಕಲ್ಪನೆ
   (c) ಅಲಂಕಾರ ಪರಿಕಲ್ಪನೆ
   (d) ವಕ್ರೋಕ್ತಿ ಪರಿಕಲ್ಪನೆ

7. 'ಯತಿವಿಲಂಘನದಿಂದರಿದಲ್ತೆ ಕನ್ನಡಂ' ಈ ಮಾತು ಬರುವುದು ಎಲ್ಲಿ ?
   (a) ಕೇಶಿರಾಜನ ಶಬ್ದಮಣಿದರ್ಪಣ
   (b) ನಾಗವರ್ಮನ ಛಂದೋಂಬುಧಿ
   (c) ನೃಪತುಂಗನ ಕವಿರಾಜಮಾರ್ಗ
   (d) ಪಂಪನ ಆದಿಪುರಾಣ

8. ಒಂದು ಅಕ್ಷರವು ಗುರುವಾಗಲು ಹಲವು ಕಾರಣಗಳಿದ್ದಾಗ ಅದನ್ನು ಹೇಗೆ ಪರಿಗಣಿಸಬೇಕು ?
   (a) ಒಂದು ಲಘುವೆಂದು
   (b) ಎರಡು ಲಘುವೆಂದು
   (c) ಒಂದು ಗುರುವೆಂದು
   (d) ಎರಡು ಗುರುವೆಂದು

9. ಪ್ರತಿಪಾದದ ಮೊದಲೆರಡು ಸ್ವರಗಳ ನಡುವೆ ಒಂದೇ ವಿಧದ ಸಜಾತೀಯ ಸಂಯುಕ್ತ ವ್ಯಂಜನ ಗಳು ಬರಲು ಯಾವ ಪ್ರಾಸವೆನಿಸುವುದು ?
   (a) ಸಿಂಹ ಪ್ರಾಸ
   (b) ಅಜ ಪ್ರಾಸ
   (c) ಶರಭ ಪ್ರಾಸ
   (d) ಹಯ ಪ್ರಾಸ

10. 'ರಗಳೆ' ಎಂದರೇನು ?
   (a) ಸಮಾನವಾದ ಮಾತ್ರಾಗಣಗಳುಳ್ಳ ಬಹುಪಾದಗಳಿಂದ ಕೂಡಿದ ವೃತ್ತವು ರಗಳೆ ಎನಿಸುವುದು.
   (b) ಸಮಾನವಾದ ಅಂಶಗಣಗಳುಳ್ಳ ಆರು ಪಾದಗಳಿಂದ ಕೂಡಿದ ವೃತ್ತವು ರಗಳೆ ಎನಿಸುವುದು.
   (c) ಸಮಾನವಾದ ಅಕ್ಷರಗಣಗಳುಳ್ಳ ಅನೇಕ ಸಾಲುಗಳ ವೃತ್ತವು ರಗಳೆ ಎನಿಸುವುದು.
   (d) ಸಮಾನವಾದ ರುದ್ರಗಣಗಳುಳ್ಳ ಬಹುಪಾದಗಳಿಂದ ಕೂಡಿದ ವೃತ್ತವು ರಗಳೆ ಎನಿಸುವುದು.

11. 'ಪೆಣ್ಣಲ್ಲವೆ ತಮ್ಮನೆಲ್ಲ ಪಡೆದ ತಾಯಿ' ಇದು ಯಾವ ಛಂದೋಪ್ರಕಾರದ ಸಾಲು ?
   (a) ಶರ ಷಟ್ಪದಿಯ ಸಾಲು
   (b) ಕಂದದ ಸಾಲು
   (c) ಸಾಂಗತ್ಯದ ಸಾಲು
   (d) ಚೌಪದಿಯ ಸಾಲು

12. 'ಮಂದರಧರಗಣಮೊಂದಿರೆ ಕಡೆಯೊಳ್ ಕುಂದದೆ ನೆಲಸುಗೆ ಮದನ ಹರಂ'
   (a) ನಾಗವರ್ಮ ಹೇಳುವ ಮೂಲ ಷಟ್ಪದಿಯ ಲಕ್ಷಣ
   (b) ನಾಗವರ್ಮ ಹೇಳುವ ಕಂದದ ಲಕ್ಷಣ
   (c) ನಾಗವರ್ಮ ಹೇಳುವ ಸಾಂಗತ್ಯದ ಲಕ್ಷಣ
   (d) ನಾಗವರ್ಮ ಹೇಳುವ ಗೀತಿಕೆಯ ಲಕ್ಷಣ

13. ಕನ್ನಡ ಛಂದಸ್ಸಿನ ಕೆಲ ಸಂಗತಿಗಳ ಬಗ್ಗೆ ಪ್ರಸ್ತಾಪ ಮಾಡುವ ಮೊದಲ ಕೃತಿ
   (a) ಕವಿರಾಜಮಾರ್ಗ
   (b) ಛಂದೊಂಬುಧಿ
   (c) ಮಾನಸೋಲ್ಲಾಸ
   (d) ಛಂದಸ್ಸಾರ

14. 'ಪಂಡಿತರುಂ ವಿವಿಧಕಳಾಮಂಡಿತರುಂ ಕೇಳತಕ್ಕ ಕೃತಿಯಂ ಕ್ಷಿತಿಯೊಳ್' ಇದು ಯಾವ ಛಂದಸ್ಸಿನಲ್ಲಿದೆ ?
   (a) ಏಳೆ
   (b) ಕಂದ
   (c) ಗೀತಿಕೆ
   (d) ಮಂದಾನಿಲ ರಗಳೆ

15. ಪಟ್ಟಿ-I ನ್ನು ಪಟ್ಟಿ-II ರೊಂದಿಗೆ ಹೊಂದಿಸಿ.

| ಪಟ್ಟಿ-I | ಪಟ್ಟಿ-II |
|---|---|
| A. ಶಾಂತಿಪುರಾಣ | 1. ದುರ್ಗಸಿಂಹ |
| B. ಗದಾಯುದ್ಧ | 2. ರಾಘವಾಂಕ |
| C. ಪಂಚತಂತ್ರ | 3. ಪೊನ್ನ |
| D. ಹರಿಶ್ಚಂದ್ರ ಕಾವ್ಯ | 4. ಜನ್ನ |
| | 5. ರನ್ನ |

**ಸಂಕೇತ ಬಳಸಿ ಸರಿಯಾದ ಉತ್ತರವನ್ನು ಆರಿಸಿ.**

| | A | B | C | D |
|---|---|---|---|---|
| (a) | 3 | 4 | 2 | 1 |
| (b) | 2 | 5 | 3 | 1 |
| (c) | 3 | 5 | 1 | 2 |
| (d) | 2 | 1 | 3 | 5 |

**16.** ಪಟ್ಟಿ-I ನ್ನು ಪಟ್ಟಿ-II ರೊಂದಿಗೆ ಹೊಂದಿಸಿ.

| ಪಟ್ಟಿ-I | ಪಟ್ಟಿ-II |
|---|---|
| A. ಬಸವಣ್ಣ | 1. ಚೆನ್ನಮಲ್ಲಿಕಾರ್ಜುನ |
| B. ಅಕ್ಕಮಹಾದೇವಿ | 2. ರಾಮನಾಥ |
| C. ಅಲ್ಲಮ | 3. ಕೂಡಲ ಸಂಗಮದೇವ |
| D. ಜೇಡರ ದಾಸಿಮಯ್ಯ | 4. ಗುಹೇಶ್ವರ |
| | 5. ಕಪಿಲಸಿದ್ಧ ಮಲ್ಲಿಕಾರ್ಜುನ |

**ಸಂಕೇತ ಬಳಸಿ ಸರಿಯಾದ ಉತ್ತರವನ್ನು ಆರಿಸಿ.**

| | A | B | C | D |
|---|---|---|---|---|
| (a) | 3 | 1 | 4 | 2 |
| (b) | 3 | 2 | 4 | 5 |
| (c) | 5 | 1 | 3 | 4 |
| (d) | 2 | 1 | 4 | 5 |

**17.** ಪಟ್ಟಿ-I ನ್ನು ಪಟ್ಟಿ-II ರೊಂದಿಗೆ ಹೊಂದಿಸಿ.

| ಪಟ್ಟಿ-I | ಪಟ್ಟಿ-II |
|---|---|
| A. ಗೋವಿಂದಪೈ | 1. ರತ್ನನ ಪದಗಳು |
| B. ಬೇಂದ್ರೆ | 2. ಕೊಳಲು |
| C. ರಾಜರತ್ನಂ | 3. ನಾಕುತಂತಿ |
| D. ನರಸಿಂಹಸ್ವಾಮಿ | 4. ಗೊಲ್ಗೊಥಾ |
| | 5. ಮೈಸೂರುಮಲ್ಲಿಗೆ |

**ಸಂಕೇತ ಬಳಸಿ ಸರಿಯಾದ ಉತ್ತರವನ್ನು ಆರಿಸಿ.**

| | A | B | C | D |
|---|---|---|---|---|
| (a) | 2 | 3 | 4 | 1 |
| (b) | 3 | 5 | 1 | 2 |
| (c) | 2 | 3 | 1 | 4 |
| (d) | 4 | 3 | 1 | 5 |

**18.** ಪಟ್ಟಿ-I ನ್ನು ಪಟ್ಟಿ-II ರೊಂದಿಗೆ ಹೊಂದಿಸಿ.

| ಪಟ್ಟಿ-I | ಪಟ್ಟಿ-II |
|---|---|
| A. ಶಿವರಾಮ ಕಾರಂತ | 1. ಸಂಸ್ಕಾರ |
| B. ಕುವೆಂಪು | 2. ಚಿರಸ್ಮರಣೆ |
| C. ಅನಂತಮೂರ್ತಿ | 3. ಕಾಡು |
| D. ನಿರಂಜನ | 4. ಚೋಮನದುಡಿ |
| | 5. ಮಲೆಗಳಲ್ಲಿ ಮದುಮಗಳು |

**ಸಂಕೇತ ಬಳಸಿ ಸರಿಯಾದ ಉತ್ತರವನ್ನು ಆರಿಸಿ.**

| | A | B | C | D |
|---|---|---|---|---|
| (a) | 5 | 1 | 4 | 2 |
| (b) | 4 | 5 | 1 | 2 |
| (c) | 2 | 5 | 3 | 1 |
| (d) | 4 | 5 | 3 | 1 |

**19.** ಇವು ಚಂದ್ರಶೇಖರ ಕಂಬಾರರ ನಾಟಕಗಳು.

(a) ಸಿರಿಸಂಪಿಗೆ ಮತ್ತು ತಲೆದಂಡ

(b) ಸಂಗ್ಯಾಬಾಳ್ಯ ಮತ್ತು ನಾಗಮಂಡಲ

(c) ಸಂಗ್ಯಾಬಾಳ್ಯ ಮತ್ತು ಸಿರಿಸಂಪಿಗೆ

(d) ನಾಗಮಂಡಲ ಮತ್ತು ತಲೆದಂಡ

**20.** ಯಾವ ಶಾಸನದಲ್ಲಿ ಕಪ್ಪೆ ಅರಭಟ್ಟನ ವಿಷಯ ಪ್ರಸ್ತಾಪಗೊಂಡಿದೆ ?

(a) ಹಲ್ಮಿಡಿ ಶಾಸನ

(b) ಬಾದಾಮಿ ಶಾಸನ

(c) ಶ್ರವಣ ಬೆಳಗೊಳದ ಶಾಸನ

(d) ಐಹೊಳೆ ಶಾಸನ

**21.** ಬ್ರಹ್ಮ ಶಿವ ಬರೆದ ಚಂಪೂಕಾವ್ಯದ ಹೆಸರೇನು ? ಆರಿಸಿ.

(a) ಧರ್ಮಾಮೃತ

(b) ಹರಿವಂಶ ಪುರಾಣ

(c) ನೇಮಿನಾಥ ಪುರಾಣ

(d) ಸಮಯ ಪರೀಕ್ಷೆ

22. ಈ ಕೆಳಗಿನ ನಾಲ್ಕರಲ್ಲಿ ಯಾವ ಕೃತಿಗೆ "ಉಪಸರ್ಗ ಕೇವಲಿಗಳ ಕಥೆ" ಎಂದು ಕರೆಯಲಾಗಿದೆ ?

(a) ಸೂಕ್ತಿ ಸುಧಾರ್ಣವ

(b) ಕವಿರಾಜಮಾರ್ಗ

(c) ಚೂಡಾಮಣಿ

(d) ವಡ್ಡಾರಾಧನೆ

23. "ಕರ್ನಾಟಕ ಕಾದಂಬರಿ" ಎಂಬ ಚಂಪೂ ಕಾವ್ಯವನ್ನು ರಚಿಸಿದ ಕವಿ.

(a) ನಯಸೇನ

(b) ನೇಮಿಚಂದ್ರ

(c) ಒಂದನೇ ನಾಗವರ್ಮ

(d) ನಾಗಚಂದ್ರ

24. "ಪೊಲ್ಲಮೆಯೆ ಲೇಸು ನಲ್ಲರ ಮೈಯೊಳ್" ಈ ಮಾತನ್ನು ಯಾರು ಯಾರಿಗೆ ಹೇಳಿದರು ?

(a) ಅಮೃತಮತಿ ಅಷ್ಟಾವಂಕನಿಗೆ

(b) ಅಮೃತಮತಿ ಯಶೋಧರನಿಗೆ

(c) ಚಂದ್ರಮತಿ ಅಮೃತಮತಿಗೆ

(d) ಅಮೃತಮತಿ ದಾಸಿಗೆ

25. ಪೊನ್ನನು ಯಾವ ರಾಜರ ಆಸ್ಥಾನದಲ್ಲಿ ಕವಿಯಾಗಿದ್ದನು ?

(a) ರಾಷ್ಟ್ರಕೂಟ 3ನೇ ಕೃಷ್ಣ (ಮುಮ್ಮಡಿಕೃಷ್ಣ)

(b) ಗಂಗ ರಾಚಮಲ್ಲ

(c) ಚಾಲುಕ್ಯ ತೈಲಪ

(d) ಹೊಯ್ಸಳ 1ನೇ ಬಲ್ಲಾಳ

26. "ನೆನೆಯದಿರಣ್ಣ ಭಾರತದೊಳ್ ಪೆಱರಾರು ಮನೊಂದೆ ಚಿತ್ತದಿಂ" ಪಂಪನ ಈ ಸಾಲುಗಳು ಯಾರನ್ನು ಕುರಿತದ್ದಾಗಿದೆ ?

(a) ಧರ್ಮರಾಯ

(b) ಅರ್ಜುನ

(c) ಕೃಷ್ಣ

(d) ಕರ್ಣ

27. ಹರಿಹರ ರಚಿಸಿದ "ಗಿರಿಜಾ ಕಲ್ಯಾಣ" ಎಂಬ ಕಾವ್ಯ ಈ ಕೆಳಗಿನ ಯಾವ ಛಂದೋರೂಪದಲ್ಲಿದೆ ?

(a) ಭಾಮಿನಿ ಷಟ್ಪದಿ

(b) ಸಾಂಗತ್ಯ

(c) ಚಂಪು

(d) ರಗಳೆ

28. ಕುಮಾರ ವಾಲ್ಮೀಕಿ ಬರೆದಂತಹ ಕೃತಿ ಯಾವುದು ?

(a) ಅಂಜನಾ ಚರಿತ್ರೆ

(b) ತೊರವೆ ರಾಮಾಯಣ

(c) ಸೌಂದರ ಪುರಾಣ

(d) ಮನೋವಿಜಯ ಕಾವ್ಯ

29. "ತೆರಣಿಯ ಹುಳು ತನ್ನ ಸ್ನೇಹದಿಂದ ಮನೆಯ ಮಾಡಿ ತನ್ನ ನೂಲು ತನ್ನನ್ನೇ ಸುತ್ತಿ ಸಾವತೆರನಂತೆ" ಈ ವಚನದ ಸಾಲುಗಳು ಯಾರವು ?

(a) ಬಸವಣ್ಣ

(b) ಸಿದ್ಧರಾಮೇಶ್ವರ

(c) ಅಕ್ಕಮಹಾದೇವಿ

(d) ಅಂಬಿಗರ ಚೌಡಯ್ಯ

30. "ಕುಮಾರ ರಾಮ ಸಾಂಗತ್ಯ" ಎಂಬ ಕಾವ್ಯವನ್ನು ಬರೆದ ಕವಿ ಯಾರು ?

(a) ಹರಿಹರ

(b) ರಾಘವಾಂಕ

(c) ಲಕ್ಷ್ಮೀಶ

(d) ನಂಜುಂಡ ಕವಿ

31. "ರೂಪಕ ಸಾಮ್ರಾಜ್ಯದ ಚಕ್ರವರ್ತಿ" ಎಂದು ಯಾರನ್ನು ಕರೆಯುತ್ತಾರೆ ?

(a) ಚಾಮರಸ

(b) ರತ್ನಾಕರವರ್ಣಿ

(c) ಕುಮಾರ ವ್ಯಾಸ

(d) ಷಡಕ್ಷರ ದೇವ

32. ರಾಘವಾಂಕನ "ವೀರೇಶ ಚರಿತೆ" ಯಾವ ಷಟ್ಪದಿಯಲ್ಲಿ ರಚಿತವಾಗಿದೆ ?

(a) ಭಾಮಿನಿ ಷಟ್ಪದಿ

(b) ವಾರ್ಧಕ ಷಟ್ಪದಿ

(c) ಉದ್ದಂಡ ಷಟ್ಪದಿ

(d) ಭೋಗ ಷಟ್ಪದಿ

33. "ಆತ್ಮ ಯಾವ ಕುಲ, ಜೀವ ಯಾವ ಕುಲ ತತ್ವೇಂದ್ರಿಯಗಳ ಕುಲ ಪೇಳಿರಯ್ಯ" ಎಂದು ಬಿಚ್ಚು ನುಡಿಯಲ್ಲಿ ಸಮಾಜದ ಓರೆ ಕೋರೆಗಳನ್ನು ತಿದ್ದುವ ಈ ನುಡಿಗಳನ್ನುಳ್ಳ ಕೃತಿಯ ಕರ್ತೃ ಯಾರು ?

(a) ವಾದಿರಾಜರು

(b) ವ್ಯಾಸರಾಯರು

(c) ಪುರಂದರದಾಸರು

(d) ಕನಕದಾಸರು

34. "ಕರ್ನಾಟಕದ ಸಂಗೀತ ಪಿತಾಮಹ" ಎಂದು ಯಾರನ್ನು ಕರೆಯುತ್ತಾರೆ ?

(a) ನರಹರಿತೀರ್ಥರು

(b) ಶ್ರೀಪಾದರಾಜರು

(c) ವಿಜಯದಾಸರು

(d) ಪುರಂದರದಾಸರು

35. "ಪೆಣ್ಣಲ್ಲವೆ ನಮ್ಮನೆಲ್ಲ ಪಡೆದ ತಾಯಿ ಪೆಣ್ಣಲ್ಲವೆ ಪೊರೆದವಳು ಪೆಣ್ಣು ಪೆಣ್ಣಿಂದೇತಕೆ ಬೀಳುಗಳೆವರು ಕಣ್ಣು ಕಾಣದ ಗಾವಿಲರು" ಎಂಬುದಾಗಿ ಸ್ತ್ರೀವಾದಿ ನಿಲುವನ್ನು ವ್ಯಕ್ತಪಡಿಸುವ ಈ ಸಾಲುಗಳ ಕವಿಯಿತ್ರಿ,

(a) ಅಕ್ಕಮಹಾದೇವಿ

(b) ಸಂಚಿ ಹೊನ್ನಮ್ಮ

(c) ಹೆಳವನ ಕಟ್ಟೆ ಗಿರಿಯಮ್ಮ

(d) ಮುಕ್ತಾಯಕ್ಕ

36. ಮಾಸ್ತಿ ವೆಂಕಟೇಶ ಅಯ್ಯಂಗಾರ್ ರವರಿಗೆ ಜ್ಞಾನಪೀಠ ಸಂದ ವರ್ಷ

(a) 1983

(b) 1985

(c) 1980

(d) 1981

37. "ಹಚ್ಚೇವು ಕನ್ನಡದ ದೀಪ" ಎಂಬ ಪದ್ಯವನ್ನು ರಚಿಸಿ ಕನ್ನಡಾಭಿಮಾನವನ್ನು ಮೆರೆದ ಕವಿಯ ಹೆಸರು.

(a) ಕಯ್ಯಾರ ಕಿಞ್ಞಣ್ಣರೈ

(b) ಡಿ.ಎಸ್. ಕರ್ಕಿ

(c) ಕಾವ್ಯಾನಂದ

(d) ಗೋಪಾಲಕೃಷ್ಣ ಅಡಿಗರು

38. ಕೇಂದ್ರ ಸರ್ಕಾರ ಕೊಡುವ 'ರಾಷ್ಟ್ರಕವಿ' ಗೌರವವನ್ನು ಮೊಟ್ಟ ಮೊದಲು ಪಡೆದ ಕವಿ

(a) ಕುವೆಂಪು

(b) ಎಂ. ಗೋವಿಂದ ಪೈ

(c) ಜಿ.ಎಸ್. ಶಿವರುದ್ರಪ್ಪ

(d) ಬೇಂದ್ರೆ

39. ಶಿವಮೊಗ್ಗದಲ್ಲಿ 2007 ರಲ್ಲಿ ಜರುಗಿದ 73ನೆಯ ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದವರು

(a) ಪ್ರೊ.ಕೆ.ಎಸ್. ನಿಸಾರ್ ಅಹಮದ್

(b) ಚಂದ್ರಶೇಖರ ಕಂಬಾರರು

(c) ಜಿ. ವೆಂಕಟಸುಬ್ಬಯ್ಯ

(d) ಕಮಲಾ ಹಂಪನ

40. ಪಟ್ಟಿ-I ನ್ನು ಪಟ್ಟಿ-II ರೊಂದಿಗೆ ಹೊಂದಿಸಿ ಬರೆಯಿರಿ.

| ಪಟ್ಟಿ-I | ಪಟ್ಟಿ-II |
|---|---|
| A. ಉಷಾ ನವರತ್ನರಾಂ | 1. ಬೆಳ್ಳಿಮೋಡ |
| B. ತ್ರಿವೇಣಿ | 2. ಫಣಿಯಮ್ಮ |
| C. ಸಾರಾ ಅಬೂಬಕ್ಕರ್ | 3. ಹೊಂಬಿಸಿಲು |
| D. ಎಂ.ಕೆ. ಇಂದಿರಾ | 4. ಚಂದ್ರಗಿರಿಯ ತೀರದಲ್ಲಿ |

**ಸಂಕೇತ ಬಳಸಿ ಸರಿ ಉತ್ತರ ಆರಿಸಿ .**

| | A | B | C | D |
|---|---|---|---|---|
| (a) | 3 | 1 | 4 | 2 |
| (b) | 4 | 1 | 2 | 3 |
| (c) | 2 | 4 | 1 | 3 |
| (d) | 3 | 4 | 2 | 1 |

41. 'ಸ್ಮಶಾನ ಕುರುಕ್ಷೇತ್ರ' ನಾಟಕವನ್ನು ಬರೆದವರು

(a) ಬಿ.ಎಂ.ಶ್ರೀ

(b) ತೀ.ನಂ.ಶ್ರೀ

(c) ಕುವೆಂಪು

(d) ಶ್ರೀರಂಗ

42. ಕೆಳಗಿನ ಗೀತನಾಟಕಗಳಲ್ಲಿ ಯಾವುದು ಗೀತನಾಟಕವಲ್ಲ ಗುರುತಿಸಿ.

(a) ಅಹಲ್ಯೆ

(b) ಸೋಮಿಯ ಭಾಗ್ಯ

(c) ಊರ್ವಶಿ

(d) ಚಿತ್ರಾಂಗದಾ

43. "ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು" ಎಂಬ ನಾಡಗೀತೆಯನ್ನು ರಚಿಸಿ ನವ ಕರ್ನಾಟಕದ ಅಭ್ಯುದಯವನ್ನು ಕೋರಿದ ಕವಿ

(a) ಎಸ್.ವಿ. ಪರಮೇಶ್ವರಭಟ್ಟರು

(b) ಕೆ.ಎಸ್. ನರಸಿಂಹಸ್ವಾಮಿ

(c) ಹುಯಿಲಗೋಳ ನಾರಾಯಣರಾವ್

(d) ಗೋಪಾಲಕೃಷ್ಣ ಅಡಿಗರು

44. 'ದೇವನೂರ ಮಹಾದೇವ' ಅವರ 'ಕುಸುಮಬಾಲೆ ' ಕೃತಿಗೆ ದೊರಕಿರುವ ಪ್ರಶಸ್ತಿ

(a) ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

(b) ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

(c) ರಾಜ್ಯೋತ್ಸವ ಪ್ರಶಸ್ತಿ

(d) ಪಂಪ ಪ್ರಶಸ್ತಿ

45. 'ಶಿರವೇ ಹೊನ್ನ ಕಳಸ' ಎಂಬುದು

(a) ಉಪಮಾ ಅಲಂಕಾರ

(b) ರೂಪಕ ಅಲಂಕಾರ

(c) ದೀಪಕ ಅಲಂಕಾರ

(d) ಚಿತ್ರಕವಿತ್ವ

46. ಅರ್ಥ ಸರಿಹೊಂದದ ಪದವನ್ನು ಗುರುತಿಸಿ.

(a) ತ್ರಿಪದಿ - ಮೂರು ಸಾಲಿನ ಪದ್ಯ.

(b) ಕಂದ - ನಾಲ್ಕು ಸಾಲಿನ ಪದ್ಯ.

(c) ಷಟ್ಪದಿ - ಎಂಟು ಸಾಲಿನ ಪದ್ಯ.

(d) ದ್ವಿಪದಿ - ಎರಡು ಸಾಲಿನ ಪದ್ಯ.

47. ಕನ್ನಡದ ಪ್ರಥಮ ಗದ್ಯ ಕೃತಿ

(a) ವಡ್ಡಾರಾಧನೆ

(b) ಭೂತಾರಾಧನೆ

(c) ಪಂಪಾಶತಕ

(d) ಚಂಪು

48. 'ತುಕಡಿ' ಎಂಬ ಪದದ ಸಮಾನಾರ್ಥಕ ಶಬ್ದ

(a) ಚಿಕ್ಕಸೇನಾ ವಿಭಾಗ

(b) ಚಿಕ್ಕ ಕಡ್ಡಿ

(c) ತೂಕಡಿಸು

(d) ಮಾಂಸದ ತುಂಡು

49. 'ಕಟ್ಟಾಜ್ಞೆ' ಎಂಬುದರ ವಿಗ್ರಹ ರೂಪ

(a) ಕಟ್ಟಿದ ಆಜ್ಞೆ

(b) ಕಡಿದು ಆಜ್ಞೆ

(c) ಕಟ್ಟಾದ ಆಜ್ಞೆ

(d) ಕಡಿದಾದ ಆಜ್ಞೆ

50. 'ಹುಲ್ಲುಗಾವಲು' ಎಂಬುದು

(a) ಆದೇಶ ಸಂಧಿ

(b) ಲೋಪ ಸಂಧಿ

(c) ಆಗಮ ಸಂಧಿ

(d) ಯಾವುದು ಅಲ್ಲ

51. 'ಸಾಂಗತ್ಯ' ಎನ್ನುವುದು

(a) ಸೇರಿ ಹೋಗುವುದು

(b) ಒಂದು ಛಂದೋ ಪ್ರಕಾರ

(c) ಹೊಂದಾಣಿಕೆ

(d) ಜೊತೆ ಜೊತೆಯಲಿ

52. ಕೆಳಗಿನ ಭಾಗದಲ್ಲಿ ಪದಗಳು ಕ್ರಮಬದ್ಧವಾಗಿಲ್ಲ. ಅರ್ಥ ಬರುವಂತೆ ಜೋಡಿಸಿ.

| ಕಾರಣ | ಪ್ರಗತಿಗೆ | ಸಾಕ್ಷರತೆಯು | ಗ್ರಾಮಗಳ |
|---|---|---|---|
| P | Q | R | S |

(a) S Q R P

(b) R Q P S

(c) P Q S R

(d) Q S P R

**53.** 'ಅಪರಾಧಿ' ಎಂಬುದರ ವಿರುದ್ಧ ಪದ

(a) ನಿರುಪದ್ರವಿ

(b) ನಿರಪರಾಧಿ

(c) ನಿರುಪರಾಧಿ

(d) ಕುಪರಾಧಿ

**54.** ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ಪಡೆದ ಮೊದಲ ಕನ್ನಡಿಗ

(a) ವಿ. ಶಾಂತಾರಾಂ

(b) ಜಿ.ವಿ. ಅಯ್ಯರ್

(c) ಡಾ. ರಾಜಕುಮಾರ್

(d) ಕೆ.ವಿ. ಅಕ್ಷರ

**55.** 'ಕರತಲಾಮಲಕ' ಎಂದರೆ

(a) ಅಂಗೈ ಮೇಲಿನ ಗಾಯ

(b) ಕೈಮೂಲಕ ತಲೆ

(c) ಅಂಗೈ ಮೇಲಿನ ನೆಲ್ಲಿಕಾಯಿ

(d) ಸುಲಭ

**56.** 'ಗುಹೇಶ್ವರಾ' ಎಂಬುದು ಯಾರ ಅಂಕಿತ ನಾಮ ?

(a) ಬಸವಣ್ಣ

(b) ಜೇಡರ ದಾಸಿಮಯ್ಯ

(c) ಅಲ್ಲಮಪ್ರಭು

(d) ಚೆನ್ನಬಸವಣ್ಣ

**57.** 'ಚಳ್ಳೆಹಣ್ಣು ತಿನ್ನಿಸು' ಎಂದರೆ

(a) ನೆರವಾಗುವುದು

(b) ಹಣ್ಣು ನೀಡುವುದು

(c) ಮೋಸ ಮಾಡುವುದು

(d) ತೊಂದರೆ ನೀಡುವುದು

**58.** 'ಅಧಿಕಾರ' ಎಂಬುದು

(a) ದೈವದತ್ತವಾದ ಶಕ್ತಿ

(b) ಪತ್ರಕರ್ತರು ನೀಡಿದ ಶಕ್ತಿ

(c) ಆಡಳಿತಗಾರರು ಪಡೆದುಕೊಂಡ ಶಕ್ತಿ

(d) ರಾಷ್ಟ್ರದ ಪ್ರಜೆಗಳು ರೂಪಿಸಿದ ಶಕ್ತಿ

**59.** I ಮತ್ತು II ನೇ ಪಟ್ಟಿಯನ್ನು ಹೊಂದಿಸಿ

| ಪಟ್ಟಿ-I | ಪಟ್ಟಿ-II |
|---|---|
| A. ಕಾಳಿದಾಸ | 1. ರಾಮಾಯಣ ದರ್ಶನಂ |
| B. ಶಿವರಾಮಕಾರಂತ | 2. ಶಾಕುಂತಲ |
| C. ಪು.ತಿ.ನ. | 3. ಬೆಟ್ಟದ ಜೀವ |
| D. ಕುವೆಂಪು | 4. ಹರಿ ಚರಿತೆ |

**ಕೆಳಗಿನ ಸಂಕೇತಗಳನ್ನು ಉಪಯೋಗಿಸಿ, ಸರಿಯಾದ ಉತ್ತರವನ್ನು ಆರಿಸಿ.**

| | A | B | C | D |
|---|---|---|---|---|
| (a) | 4 | 3 | 2 | 1 |
| (b) | 3 | 4 | 1 | 2 |
| (c) | 2 | 3 | 4 | 1 |
| (d) | 1 | 4 | 3 | 2 |

**60.** ತಿಂಗಳು ಎಂದರೆ

(a) ಸೂರ್ಯ

(b) ಗ್ರಹ

(c) ಚಂದ್ರ

(d) ಗಗನ

**61.** ಪಟ್ಟಿ-I ರೊಡನೆ ಪಟ್ಟಿ-II ನ್ನು ಹೊಂದಿಸಿ ಬರೆಯಿರಿ

| ಪಟ್ಟಿ-I | ಪಟ್ಟಿ-II |
|---|---|
| A. ದೀಪವು ನಿನ್ನದೇ | 1. ಕುವೆಂಪು |
| B. ಜಯಭಾರತಿ ಜನನಿ | 2. ಕೆ.ಎಸ್. ನರಸಿಂಹಸ್ವಾಮಿ |
| C. ಜನಗಣಮನ | 3. ಬಂಕಿಮಚಂದ್ರ |
| D. ವಂದೇಮಾತರಂ | 4. ರವೀಂದ್ರನಾಥ ಟ್ಯಾಗೋರ್ |

**ಕೆಳಗಿನ ಸಂಕೇತಗಳನ್ನು ಉಪಯೋಗಿಸಿ, ಸರಿಯಾದ ಉತ್ತರವನ್ನು ಆರಿಸಿ.**

| | A | B | C | D |
|---|---|---|---|---|
| (a) | 1 | 2 | 3 | 4 |
| (b) | 2 | 1 | 4 | 3 |
| (c) | 4 | 2 | 1 | 3 |
| (d) | 3 | 4 | 1 | 2 |

**62.** 'ಆತ್ಮಜ' ಎಂಬುದರ ಸಮಾನಾರ್ಥಕ ಪದ

(a) ತಂದೆ

(b) ಮಗ

(c) ಸೋದರ

(d) ಮಾವ

**63.** 'ಚಕ್ರಪಾಣಿ' ಎನ್ನುವುದು

(a) ದ್ವಂದ್ವ ಸಮಾಸ

(b) ಕ್ರಿಯಾಸಮಾಸ

(c) ಬಹುವ್ರೀಹಿ ಸಮಾಸ

(d) ಗಮಕ ಸಮಾಸ

**64.** ಆಡು ಭಾಷೆ ಎಂದರೆ

(a) ಮೃತ ಭಾಷೆ

(b) ದೈನಂದಿನ ಭಾಷೆ

(c) ಸಂಕೇತಿಕ ಭಾಷೆ

(d) ಸಾಮಾನ್ಯ ಭಾಷೆ

65. 'ಕನ್ನಡಂ ಕತ್ತೂರಿಯಲ್ತೆ' ಎಂದು ಹೇಳಿದ ಕವಿ ಯಾರು ?

(a) ಕುವೆಂಪು

(b) ಬಿ.ಎಂ. ಶ್ರೀಕಂಠಯ್ಯ

(c) ಮುದ್ದಣ

(d) ಕೆ.ಎಸ್. ನರಸಿಂಹಸ್ವಾಮಿ

66. 'ಸಿರಿಗನ್ನಡಂ ಗೆಲ್ಗೆ, ಸಿರಿಗನ್ನಡಂ ಬಾಳ್ಗೆ' ಎಂಬ ಹೇಳಿಕೆಯನ್ನು ಜನಪ್ರಿಯಗೊಳಿಸಿದವರು ಯಾರು ?

(a) ಬಿ.ಎಂ. ಶ್ರೀಕಂಠಯ್ಯ

(b) ಎಂ. ಗೋವಿಂದ ಪೈ

(c) ಜಿ.ಪಿ. ರಾಜರತ್ನಂ

(d) ಜಿ.ಎಸ್. ಶಿವರುದ್ರಪ್ಪ

67. ಹಲ್ಮಿಡಿ ಶಾಸನದಲ್ಲಿನ ಭಾಷೆ

(a) ಹೊಸಗನ್ನಡ

(b) ಹಳಗನ್ನಡ

(c) ನಡುಗನ್ನಡ

(d) ಪೂರ್ವದ ಹಳಗನ್ನಡ

68. 'ಕನ್ನಡ ಭಾಷೆಯ ಬಗ್ಗೆ ನೀವೇನು ಬಲ್ಲಿರಿ' ಕೃತಿಯ ಕರ್ತೃ ಯಾರು ?

(a) ಎಲ್. ಬಸವರಾಜು

(b) ಡಿ.ಎನ್. ಶಂಕರಭಟ್ಟ

(c) ಎಂ. ಗೋಪಾಲ ಭಟ್ಟ

(d) ಕೆ.ವಿ. ನಾರಾಯಣ

69. ವಾಕ್ಯ ಎಂದರೇನು ?

(a) ಸಂಪೂರ್ಣ ಅರ್ಥವನ್ನು ಒಳಗೊಂಡ ಪದಗಳ ಗುಂಪು

(b) ಕನಿಷ್ಟ ಅರ್ಥವನ್ನು ಒಳಗೊಂಡ ಪದಗಳ ಗುಂಪು

(c) ಬೇರೆ ಬೇರೆ ಅರ್ಥವನ್ನು ಒಳಗೊಂಡ ಪದಗಳ ಗುಂಪು

(d) ಅರ್ಥವಿಲ್ಲದೆ ಇರುವ ಪದಗಳ ಗುಂಪು

70. ಕನ್ನಡ ಭಾಷೆಯ ಸಂಧಿಗಳು ಯಾವುವು ?

(a) ಲೋಪ, ಆಗಮ, ಆದೇಶ

(b) ಸವರ್ಣದೀರ್ಘಸಂಧಿ, ಯಣ್‌ಸಂಧಿ, ಗುಣಸಂಧಿ

(c) ಗುಣಸಂಧಿ, ವೃದ್ಧಿಸಂಧಿ, ಯಣ್‌ಸಂಧಿ

(d) ವೃದ್ಧಿಸಂಧಿ, ಸವರ್ಣದೀರ್ಘಸಂಧಿ, ಗುಣಸಂಧಿ

71. 'ಸಂಧಿ' ಎಂದರೇನು ?

(a) ಪದಗಳು ದೂರ ದೂರವಾಗುವುದು

(b) ಪದಗಳು ಅರ್ಥಕ್ಕನುಗುಣವಾಗಿ ಒಂದಕ್ಕೊಂದು ಎಡೆಬಿಡದೆ ಸೇರುವುದು

(c) ಪದಗಳು ಸಿಡಿದು ಹೋಗುವುದು

(d) ಪದಗಳು ಚಲಿಸುವುದು

72. ಧ್ವನಿ ಎಂದರೆ

(a) ಸದ್ದು

(b) ಗಲಾಟೆ

(c) ಗೊಂದಲ

(d) ಭಾಷೆಯ ಚಿಕ್ಕಘಟಕ

73. 'ಭಾಷಾ ವಿಜ್ಞಾನದ ಮೂಲತತ್ವಗಳು' ಎಂಬ ಕೃತಿಯ ಲೇಖಕರು ಯಾರು ?

(a) ಸಂಗಮೇಶ ಸವದತ್ತಿ ಮಠ

(b) ಕೆ.ವಿ. ನಾರಾಯಣ

(c) ಕೆ. ಕೆಂಪೇಗೌಡ

(d) ಎಂ. ಚಿದಾನಂದಮೂರ್ತಿ

74. 'ನಿಷೇದಾರ್ಥ' ಎಂದರೆ

(a) ಇದೆ ಎಂದು ಸೂಚಿಸುವುದು

(b) ಇಲ್ಲ ಎಂದು ಸೂಚಿಸುವುದು

(c) ಹೌದು ಎಂದು ಸೂಚಿಸುವುದು

(d) ಸರಿಯಾಗಿ ಅರ್ಥಗ್ರಹಿಸಲು ಆಗದೆ ಇರುವುದು

75. ಅಲ್ಪ ಸಂಖ್ಯಾತರ ನಿರ್ದೇಶನಾಲಯದಡಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳ ವಿದ್ಯಾರ್ಥಿಗಳಿಗೆ ಎಷ್ಟು ವರ್ಷಕ್ಕೆ ಎಷ್ಟು ಹಣದಲ್ಲಿ ಹಾಸಿಗೆ-ಹೊದಿಕೆಗಳನ್ನು ಪೂರೈಸಲಾಗುವುದು ?

(a) 2 ವರ್ಷಕ್ಕೆ 300 ರೂ.ಗಳಂತೆ

(b) 3 ವರ್ಷಕ್ಕೆ 300 ರೂ.ಗಳಂತೆ

(c) 3 ವರ್ಷಕ್ಕೆ 200 ರೂ.ಗಳಂತೆ

(d) ಮೇಲಿನ ಯಾವುದೂ ಅಲ್ಲ

76. ಅಲ್ಪ ಸಂಖ್ಯಾತರ ನಿರ್ದೇಶನಾಲಯದಲ್ಲಿನ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶಕ್ಕಾಗಿ ಅಲ್ಪಸಂಖ್ಯಾತ ವಿದ್ಯಾರ್ಥಿಗಳು ಮತ್ತು ಇತರೆ ವರ್ಗದ ವಿದ್ಯಾರ್ಥಿಗಳಿಗೆ ಇರುವ ಅನುಪಾತ ಎಷ್ಟು ?

(a) 50 : 50

(b) 60 : 40

(c) 75 : 25

(d) 80 : 20

77. ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿಶಾಲೆಗಳ ನಿಲಯಾರ್ಥಿಗಳಿಗೆ ಈ ಕೆಳಗಿನ ಯಾವ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ ?

1. ಊಟ-ವಸತಿ-ವೈದ್ಯಕೀಯ ಸೌಲಭ್ಯ
2. ಹಾಸಿಗೆ-ಹೊದಿಕೆ-ಪಾಠ ಬೋಧನೆ
3. ಸಾರಿಗೆ ವೆಚ್ಚ-ಬೋಧನಾ ಸಲಕರಣೆ-4 ಜೊತೆ ಸಮವಸ್ತ್ರ
4. ಕ್ರೀಡಾ ಸಾಮಗ್ರಿ-ಗ್ರಂಥಾಲಯ-ಪ್ರಯೋಗಶಾಲೆ

**ಸರಿಯಾದ ಉತ್ತರ ಆರಿಸಿ.**

(a) 1, 3, 4

(b) 1, 2, 4

(c) 2, 3, 4

(d) 1, 2, 3

78. ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ ಪ್ರವೇಶಾವಕಾಶ ಕೋರಿ ಬರುವ ವಿದ್ಯಾರ್ಥಿಗಳ ಪಾಲಕರ ವಾರ್ಷಿಕ ಆದಾಯ ಮಿತಿ

(a) ರೂ. 44,500

(b) ರೂ. 75,000

(c) ರೂ. 1.00 ಲಕ್ಷ

(d) ರೂ. 1.50 ಲಕ್ಷ

79. ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಲ್ಲಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನಕ್ಕಾಗಿ ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳು ಯಾವ ತರಗತಿಗೆ ಸೇರಿದವರಾಗಿರಬೇಕು ?

(a) 5 ರಿಂದ 10 ನೇ ತರಗತಿ

(b) 6 ರಿಂದ 10 ನೇ ತರಗತಿ

(c) 1 ರಿಂದ 10 ನೇ ತರಗತಿ

(d) 7 ರಿಂದ 10 ನೇ ತರಗತಿ

80. ಮೆಟ್ರಿಕ್ ನಂತರದ ವಿದ್ಯಾರ್ಥಿವೇತನವನ್ನು ಯಾರಿಗೆ ಮಂಜೂರು ಮಾಡಬಹುದಾಗಿದೆ ?

(a) ಪಿ.ಯು.ಸಿ. ವಿದ್ಯಾರ್ಥಿಗಳಿಗೆ

(b) ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ

(c) ಪಿ.ಹೆಚ್.ಡಿ. ವಿದ್ಯಾರ್ಥಿಗಳಿಗೆ

(d) ಮೇಲಿನ ಎಲ್ಲಾ ವಿದ್ಯಾರ್ಥಿಗಳಿಗೆ

81. ಪರಿಹಾರ ಬೋಧನೆಯನ್ನು ಈ ಕೆಳಗಿನ ಯಾವ ತರಗತಿಯ ವಿದ್ಯಾರ್ಥಿಗಳಿಗೆ ನೀಡಲಾಗುವುದು ?

(a) 6ನೇ ಮತ್ತು 9ನೇ ತರಗತಿ ವಿದ್ಯಾರ್ಥಿಗಳಿಗೆ

(b) 7ನೇ ಮತ್ತು 10ನೇ ತರಗತಿ ವಿದ್ಯಾರ್ಥಿಗಳಿಗೆ

(c) 8ನೇ ಮತ್ತು 11ನೇ ತರಗತಿ ವಿದ್ಯಾರ್ಥಿಗಳಿಗೆ

(d) 10ನೇ ಮತ್ತು 12ನೇ ತರಗತಿ ವಿದ್ಯಾರ್ಥಿಗಳಿಗೆ

82. ಪರಿಹಾರ ಬೋಧನೆಗೆ ಗ್ರಾಮೀಣ ಪ್ರದೇಶದ ಮತ್ತು ನಗರ ಪ್ರದೇಶದ ಕೇಂದ್ರಗಳಲ್ಲಿ ಇರಬೇಕಾದ ಕನಿಷ್ಠ ವಿದ್ಯಾರ್ಥಿಗಳ ಸಂಖ್ಯಾಬಲ,

(a) ಗ್ರಾಮೀಣ ಪ್ರದೇಶಗಳಲ್ಲಿ ಕನಿಷ್ಟ 20, ನಗರ ಪ್ರದೇಶದಲ್ಲಿ ಕನಿಷ್ಟ 30 ವಿದ್ಯಾರ್ಥಿಗಳು

(b) ಗ್ರಾಮೀಣ ಪ್ರದೇಶಗಳಲ್ಲಿ ಕನಿಷ್ಟ 30, ನಗರ ಪ್ರದೇಶದಲ್ಲಿ ಕನಿಷ್ಟ 40 ವಿದ್ಯಾರ್ಥಿಗಳು

(c) ಗ್ರಾಮೀಣ ಪ್ರದೇಶಗಳಲ್ಲಿ ಕನಿಷ್ಟ 20, ನಗರ ಪ್ರದೇಶದಲ್ಲಿ ಕನಿಷ್ಟ 40 ವಿದ್ಯಾರ್ಥಿಗಳು

(d) ಗ್ರಾಮೀಣ ಪ್ರದೇಶಗಳಲ್ಲಿ ಕನಿಷ್ಟ 40, ನಗರ ಪ್ರದೇಶದಲ್ಲಿ ಕನಿಷ್ಟ 20 ವಿದ್ಯಾರ್ಥಿಗಳು

83. ಸರಕಾರಿ ಶಾಲೆಗಳಲ್ಲಿ ಪರಿಹಾರ ಬೋಧನೆ ನಡೆಸಿದಲ್ಲಿ, ಎಷ್ಟು ಪ್ರತಿಶತ ಖರ್ಚನ್ನು ಸರಕಾರ ಭರಿಸುವುದು ?

(a) ಶೇ. 50

(b) ಶೇ. 75

(c) ಶೇ. 100

(d) ಮೇಲಿನ ಯಾವುವೂ ಅಲ್ಲ

84. ಉತ್ತೇಜನ ಯೋಜನೆ ಅನುಷ್ಠಾನಕ್ಕೆ ಜಿಲ್ಲಾ ಮಟ್ಟದ ಸಮಿತಿಯ ಅಧ್ಯಕ್ಷರು

(a) ಜಿಲ್ಲಾಧಿಕಾರಿಗಳು

(b) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು

(c) ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು

(d) ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣಾಧಿಕಾರಿಗಳು

85. ‘ವಿಭಾವಾನುಭಾವ ವ್ಯಭಿಚಾರಿ ಸಂಯೋಗಾದ್ರಸ ನಿಷ್ಪತ್ತಿಃ’ ಹೇಳಿಕೆಯು ಈ ಕೃತಿಯಲ್ಲಿದೆ.

(a) ಕವಿರಾಜಮಾರ್ಗ

(b) ವಕ್ರೋಕ್ತಿಜೀವಿತ

(c) ನಾಟ್ಯಶಾಸ್ತ್ರ

(d) ಕಾವ್ಯಾದರ್ಶ

86. ‘ಗುಣವದಲಂಕೃತಂಚವಾಕ್ಯಮೇವಕಾವ್ಯಂ’ ಹೇಳಿಕೆಯು ಈತನದು

(a) ವಾಮನ

(b) ರಾಜಶೇಖರ

(c) ದಂಡಿ

(d) ಭಾಮಹ

87. ‘ಪ್ರಜ್ಞಾನವನವೋಲ್ಲೇಖಶಾಲಿನೀ ಪ್ರತಿಭಾಮತಾ’ ಹೇಳಿಕೆಯು ಈತನದು

(a) ಭಟ್ಟ ನಾರಾಯಣ

(b) ಭಟ್ಟ ಲೊಲ್ಲಟ

(c) ಭಟ್ಟ ತೌತ

(d) ಬಾಣ ಭಟ್ಟ

88. ‘ತದದೋಷೌಶಬ್ದಾರ್ಥೌಸಗುಣಾವಲಂಕೃತೀ ಪುನಃ ಕ್ವಾಪಿ’ ಹೇಳಿಕೆಯು ಈತನದು

(a) ಮಮ್ಮಟ

(b) ದಂಡಿ

(c) ಭಟ್ಟನಾಯಕ

(d) ವಾಮನ

89. ‘ಕಾವ್ಯ ಗಾಯತ್ರಿ’ ಎಂದು ಕಾವ್ಯಮೀಮಾಂಸಕರಿಂದ ಗುರುತಿಸಲ್ಪಟ್ಟವು

(a) ಅಲಂಕಾರ, ಧ್ವನಿ

(b) ಧ್ವನಿ, ರೀತಿ

(c) ರಸ, ಧ್ವನಿ, ಔಚಿತ್ಯ

(d) ಯಾವುದೂ ಅಲ್ಲ

90. ಪ್ರಾಸಗಳ ಪ್ರಭೇದಗಳ ಸಂಖ್ಯೆ

(a) ಮೂರು

(b) ನಾಲ್ಕು

(c) ಆರು

(d) ಎರಡು

91. ‘ನೆಗಟ್ಗ್’ ಶಬ್ದದ ಪ್ರಸ್ತಾರವು ಈ ಗಣಕ್ಕೆ ಹೊಂದುತ್ತದೆ

(a) ಜಗಣ

(b) ನಗಣ

(c) ಭಗಣ

(d) ಸಗಣ

92. ‘ಏಳೆ’ ಯಲ್ಲಿನ ಒಟ್ಟು ಗಣಗಳ ಸಂಖ್ಯೆ

(a) ಆರು

(b) ಏಳು

(c) ಐದು

(d) ನಾಲ್ಕು

**93.** ಸಮವೃತ್ತಗಳಲ್ಲಿನ ಪ್ರಭೇದಗಳ ಸಂಖ್ಯೆ

(a) 24

(b) 22

(c) 26

(d) 21

**94.** ಶಾರ್ದೂಲವಿಕ್ರೀಡಿತ ವೃತ್ತವು ಮೂಲತಃ ಈ ಛಂದೋಪ್ರಕಾರದಿಂದ ಕನ್ನಡಕ್ಕೆ ಬಂದಿದೆ.

(a) ಕೃತಿ

(b) ಅತಿಧೃತಿ

(c) ಆಕೃತಿ

(d) ಧೃತಿ

**95.** 'ಕವಿರಾಜಮಾರ್ಗ' ಯಾವ ಸಂಸ್ಕೃತ ಶಾಸ್ತ್ರಗ್ರಂಥವನ್ನು ಅನುಸರಿಸಿದೆ ?

(a) ವಾಮನನ ಕಾವ್ಯಾಲಂಕಾರ ಸೂತ್ರ-ವೃತ್ತಿ

(b) ಮಮ್ಮಟನ ಕಾವ್ಯಪ್ರಕಾಶ

(c) ಜಗನ್ನಾಥನ ರಸಗಂಗಾಧರ

(d) ದಂಡಿಯ ಕಾವ್ಯಾದರ್ಶ

**96.** 'ಕಾವ್ಯ ಶಬ್ದೋಯಂ ಗುಣಾಲಂಕಾರ ಸಂಸ್ಕೃತಯೋಃ ಶಬ್ದಾರ್ಥಯೋರ್ವರ್ತತೇ' ಕಾವ್ಯ ಸ್ವರೂಪ ಹೇಳುವ ಈ ವ್ಯಾಖ್ಯೆ ಯಾರದು ?

(a) ಮಮ್ಮಟ

(b) ಕುಂತಕ

(c) ವಾಮನ

(d) ಹೇಮಚಂದ್ರ

**97.** 'ಅಪಾರೇ ಕಾವ್ಯಸಂಸಾರೇ ಕವಿರೇವ ಪ್ರಜಾಪತಿಃ' ಈ ಮಾತು ಹೇಳಿದವರು ಯಾರು ? ಯಾವ ಕೃತಿಯಲ್ಲಿ ?

(a) ಮಹಿಮಭಟ್ಟ - ವ್ಯಕ್ತಿವಿವೇಕ

(b) ಧನಂಜಯ - ದಶರೂಪಕ

(c) ಭಟ್ಟತೌತ - ಕಾವ್ಯಾನುಶಾಸನ

(d) ಆನಂದ ವರ್ಧನ - ಧ್ವನ್ಯಾಲೋಕ

**98.** 'ಅನುಚಿತಾರ್ಥ' ಎಂಬುದು ಯಾವುದು ?

(a) ಪದದೋಷ

(b) ಅರ್ಥದೋಷ

(c) ರಸದೋಷ

(d) ಗುಣದೋಷ

**99.** 'ಇದು ಪೊಸರೀತಿ ನೋಡಿದು ನವೀನಮಲಂಕೃತಿ' ಈ ಮಾತು ಯಾವ ಅಲಂಕಾರಕ್ಕೆ ಉದಾಹರಣೆ ?

(a) ಅಪ್ರಸ್ತುತ ಪ್ರಶಂಸೆ

(b) ಸಹೋಕ್ತಿ

(c) ಅತಿಶಯೋಕ್ತಿ

(d) ವಿನೋದೋಕ್ತಿ

**100.** 'ಕಟ್ಟಿಯುಮೇನೊ ? ಮಾಲೆಗಾರನ ಪೊಸಬಾಸಿಗಂ ಮುಡಿವ ಭೋಗಿಗಳಿಲ್ಲದೆ ಬಾಡಿಪೋಗದೇ !' ಸಹೃದಯನ ಮಹತ್ವ ಹೇಳಿದ ಈ ಕವಿ ಯಾರು ? ಅವನ ಕಾವ್ಯ ಯಾವುದು ?

(a) ಜನ್ನ - ಅನಂತನಾಥ ಪುರಾಣ

(b) ಪಂಪ - ಆದಿಪುರಾಣ

(c) ರನ್ನ - ಗದಾಯುದ್ಧ

(d) ಪೊನ್ನ - ಶಾಂತಿಪುರಾಣ

ಚಿತ್ತು ಬರಹಕ್ಕಾಗಿ ಸ್ಥಳ